ಇ) 1. ಕೈಗಾರಿಕಾ ವಸಾಹತು ಹಿನಕಲ್‌ನಲ್ಲಿ ಅಂದಾಜು ವೆಚ್ಚ ರೂ. 3.35 ಲಕ್ಷಗಳ ವಿದ್ಯುತ್ ಸಂಪರ್ಕ ಒದಗಿಸುವ ಕಾಮಗಾರಿ ಕೈಗೊಳ್ಳಲಾಗುತ್ತಿದೆ.

2. ಕೈಗಾರಿಕಾ ವಸಾಹತು ಹೆಬ್ಬಾಳನಲ್ಲಿ ಸುಮಾರು 30 ಎಕರೆ ವಿಸ್ತೀರ್ಣದಲ್ಲಿ ನಿರ್ದೇಶನಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು, ಇದರ ಅಂದಾಜು ವೆಚ್ಚ ರೂ. 130.00 ಲಕ್ಷಗಳು.

ಕೆ.ಐ.ಎ.ಡಿ.ಬಿ.

ಮೈಸೂರು ನಗರದಲ್ಲಿ: ಮೈಸೂರು ಕೈಗಾರಿಕಾ ಪ್ರದೇಶ 1ನೇ ಹಂತದ ಪ್ರದೇಶಗಳಿಗೆ ಹಾಗೂ ನಂಜನಗೂಡು ತಾಲ್ಲೂಕಿನ ತಾಂಡ್ಯ ಕೈಗಾರಿಕಾ ಪ್ರದೇಶಗಳಿಗೆ ಹಾಲಿ ಇರುವ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೆ ಹೆಚ್ಚಿಸುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಅಂದಾಜು ಯೋಜನಾ ವೆಚ್ಚ ಕೆಳಕಂಡಂತಿದೆ:

ಮೈಸೂರು ನಗರ:

1.	ಬೆಳವಾಡಿ ಮತ್ತು ಹೂಟಗಳ್ಳಿ ಕೈ. ಪ್ರದೇಶ	ರೂ. 199.65 ಲಕ್ಷ
2.	ಹೆಬ್ಬಾಳ್ ಕೈ. ಪ್ರದೇಶ	ರೂ. 199.65 ಲಕ್ಷ
3.	ಎಲೆಕ್ಟ್ರಾನಿಕ್ ಸಿಟಿ ಹೆಬ್ಬಾಳ ಕೈ. ಪ್ರದೇಶ	ರೂ. 199.65 ಲಕ್ಷ
4.	ಮೆಟಗಳ್ಳಿ ಮತ್ತು ಬೆಳಗೊಳ ಕೈಗಾರಿಕಾ ಪ್ರದೇಶ.	ರೂ. 199.10 ಲಕ್ಷ ರೂ. 798.05 ಲಕ್ಷ

ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆ

1.	ನಂಜನಗೂಡು ಕೈ. ಪ್ರದೇಶ	ರೂ. 30.00 ಲಕ್ಷ
2.	ತಾಂಡ್ಯ ಕೈಗಾರಿಕಾ ಪ್ರದೇಶ	ರೂ. 104.00 ಲಕ್ಷ
		ರೂ. 134.00 ಲಕ್ಷ

419 (631) ಶ್ರೀ ಸಿದ್ದು ಸಾವದಿ (ಜಮಖಂಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ:1.4.2004ರಿಂದ ಇಲ್ಲಿಯರೆಗೆ ಜಮಖಂಡಿ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯಿಂದ ಬೆಳೆಸಿದ ಮರಗಳ ಸಂಖ್ಯೆ ಎಷ್ಟು;

ಆ) ಅದಕ್ಕೆ ಖರ್ಚಾದ ಅನುದಾನವೆಷ್ಟು (ಸಂಪೂರ್ಣ ವಿವರ ಒದಗಿಸುವುದು):

ಇ) ಸದರಿ ನಾಟಿ ಮಾಡಿದ ಮರಗಳಲ್ಲಿ ಈವರೆಗೆ ಉಳಿದ ಮರಗಳೆಷ್ಟು (ವಿವರ ಒದಗಿಸುವುದು):

ಈ) ಸರಕಾರದ ಹಣ ವ್ಯಯವಾದರೂ ಸಾಧನೆಯೆಂದು ಜನ ಭಾವಿಸಿರುವುದು ನಿಜವೆ:

ಉ) ಹಾಗಿಲ್ಲದಿದ್ದಲ್ಲಿ, ಇಲಾಖೆ ಬೆಳೆಸಿದ ಮರಗಳೇನಾದವು :

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ ಈ ಕೆಳಕಂಡಂತೆ ನೆಡುತೋಪುಗಳನ್ನು ಬೆಳೆಸಲಾಗಿದೆ

ಯೋಜನೆ	2004–05	2005–06
ಎಸ್.ಜಿ.ಆರ್.ವೈ. (ಜಿಲ್ಲಾ ಪಂಚಾಯತ್)	3000 ಸಸಿಗಳು	3000 ಸಸಿಗಳು
ಎಸ್.ಜಿ.ಆರ್.ವೈ (ತಾಲ್ಲೂಕ್ ಪಂಚಾಯತ್)	16100 ಸಸಿಗಳು	11900 ಸಸಿಗಳು
ಸಿ.ಆರ್.ಎಫ್.	42078	–
ಕೆಎಸ್ ಎಫ್ ಎಂ.ಬಿ.ಸಿ	–	831 ಸಸಿಗಳು
ಎನ್.ಎ.ಸಿ–ಎಫ್.ಡಿ.ಎ.	44000 ಸಸಿಗಳು	34000 ಸಸಿಗಳು
ಯೋಜನೆ	2004–05(ರೂ. ಲಕ್ಷಗಳಲ್ಲಿ)	2005–06(ರೂ. ಲಕ್ಷಗಳಲ್ಲಿ)
ಎಸ್.ಜಿ.ಆರ್.ವೈ (ಜಿಲ್ಲಾ ಪಂಚಾಯತ್)	8.817	7.247
ಯೋಜನೆ	2004–05 ರೂ. ಲಕ್ಷಗಳಲ್ಲಿ	2005–06
ಎಸ್.ಜಿ.ಆರ್.ವೈ. (ತಾಲ್ಲೂಕು ಪಂಚಾಯತ್)	13.226	15.651
ಸಿ.ಆರ್.ಎಫ್.	10.410	–
ಕೆ.ಎಸ್.ಎಫ್.ಎಂ.ಬಿಸಿ	–	0.375
ಎನ್.ಎ.ಸಿ–ಎಫ್.ಡಿ.ಎ.	7.370	8.24
ಒಟ್ಟು	**39.823**	**31.513**

ಇ) ಸದರಿ ನಾಟಿ ಮಾಡಿದ ಮರಗಳಲ್ಲಿ ಈವರೆಗೆ 85% ರಿಂದ 90% ರಷ್ಟು ಬದುಕುಳಿದಿರುತ್ತದೆ.

ಈ) ನಾಟಿ ಮಾಡಿದ ಸಸಿಗಳಲ್ಲಿ ಅಂದಾಜು 85% ರಿಂದ 90% ಬದುಕುಳಿದಿರುವುದರಿಂದ ಸರಕಾರದ ಹಣ ಅನ್ಯತಾ ವ್ಯಯವಾಗಿರುವುದಿಲ್ಲ.

421 (660) ಶ್ರೀ ಸಿದ್ದು ಸಾವದಿ (ಜಮಖಂಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಪಟ್ಟಣಕ್ಕೆ ಹೊಂದಿಕೊಂಡಿರುವ ಅರಣ್ಯ ಇಲಾಖೆಗೆ ಸಂಬಂಧಿಸಿದ ಪ್ರವಾಸಿ ಮಂದಿರ ಹಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: